ಸುಳ್ಯ ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಯ ದೇವಸ್ಥಾನಗಳಿಗೆ ಹಣ ಬಿಡುಗಡೆ

1643 - ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 1995-96ರಿಂದ 1997-98ರವರೆಗೆ ಮುಜರಾಯಿ ಇಲಾಖೆಯಿಂದ ಸುಳ್ಯ ತಾಲ್ಲೂಕಿನ ಯಾವ ಯಾವ ದೇವಾಲಯಗಳಿಗೆ ಎಷ್ಟೆಷ್ಟು ಹಣ ಮಂಜೂರು ಮಾಡಲಾಗಿದೆ? (ಪೂರ್ಣ ವಿವರ ಒದಗಿಸುವುದು)

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ)

ವರ್ಷ	ಕಾಂಗಾರಿ ಸ್ವರೂಪ	ಒಟ್ಟು ಸಂಖ್ಯೆ	ಬಿಡುಗಡೆಯಾದ ಹಣ ರೂ.
1995-96	ದುರಸ್ಥಿ / ಜೀರ್ಣೋದ್ಧಾರ/	3	70,000.00
	ನಿರ್ಮಾಣ	2	70,000.00
1996-97	(ಈ ತಾಲ್ಲೂಕಿಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ)		ಇಲ್ಲ
1997-98	ದಿ. 31.3.98ಕ್ಕೆ ಹಣ ಬಿಡುಗಡೆಯಾಗಿದೆ.		

ಇನ್ನು ಜಿಲ್ಲಾವಾರು ಹಣ ಬಿಡುಗಡೆಯಾಗಿಲ್ಲ. (ವಿವರಗಳು ಅನುಬಂಧದಲ್ಲಿದೆ)

ಅನುಬಂಧ

ಸುಳ್ಯ ತಾಲ್ಲೂಕು **ದುರಸ್ಥಿ**

1. ಶ್ರೀ ಕೊಚ್ಚಲ ಮಾಯೂರ ವಾಹನ ಸುಬ್ರಹ್ಮಣ್ಯ ದೇ: ಕೋಲ್ಲಮಾಗ್ರು ಗ್ರಾಮ — ರೂ. 25,000.00
2. ಶ್ರೀ ಮಹಾಲಿಂಗೇಶ್ವರ ದೇ: ಬೆಳ್ಳರೆ ಗ್ರಾಮ, ಸುಳ್ಯ ತಾ: — ರೂ. 15,000.00
3. ಶ್ರೀ ಸುಬ್ರಹ್ಮಣ್ಯ ದೇ: ಜಾಲ್ಲೂರು ಗ್ರಾಮ ಸುಳ್ಯ ತಾ: — ರೂ. 30,000.00

ಕಂಇ 83 ಮುಆಬಿ 95, ದಿನಾಂಕ : 30.3.96

ನಿರ್ಮಾಣ

1. ಶ್ರೀ ಕೋಟೆ ಸುಬ್ರಹ್ಮಣ್ಯ ದೇ: ಕಳಂಜ ಸುಳ್ಯ ತಾ: — ರೂ.50,000.00

2. ಶ್ರೀ ಪರವಾರ ಪಂಚಲಿಂಗೇಶ್ವರ ದೇ: ಕುತ್ಕುಂಜ ಗ್ರಾಮ 20,000.00

1996-97

ಕಂಇ 50 ಮುಆಬಿ 96, ದಿನಾಂಕ : 31.3.97

1. ಅನುದಾನ ಬಿಡುಗಡೆ ಯಾಗಿರುವುದಿಲ್ಲ.

1997-98

1. ಇನ್ನೂ ಜಿಲ್ಲಾವಾರು ಬಿಡುಗಡೆಯಾಗಿಲ್ಲ.

ಹುಬ್ಬಳ್ಳಿ ನಗರದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳ ಭರ್ತಿ

1644 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ನಗರದಲ್ಲಿ ಒಟ್ಟು ಎಷ್ಟು ಅಂಗನವಾಡಿ ಕೇಂದ್ರಗಳಿವೆ?*

ಆ) *ಎಷ್ಟು ಅಂಗನವಾಡಿ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಾ ಇದ್ದಾರೆ?*

ಇ) *ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳು ಖಾಲಿ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?*

ಶ್ರೀಮತಿ ವಿಮಲಬಾಯಿ ಜಗದೇವರಾವ್ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಹುಬ್ಬಳ್ಳಿ ನಗರದಲ್ಲಿ ಒಟ್ಟು 55 ಅಂಗನವಾಡಿ ಕೇಂದ್ರಗಳಿವೆ.

ಆ) ಹುಬ್ಬಳ್ಳಿ ನಗರದಲ್ಲಿ ಒಟ್ಟು 55 ಅಂಗನವಾಡಿ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ) ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳು ಖಾಲಿ ಇರುವುದಿಲ್ಲ. ಆದ್ದರಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರಿನ ಯಶವಂತಪುರದಲ್ಲಿರುವ ವ್ಯವಸಾಯೋತ್ಪನ್ನ ಮಾರುಕಟ್ಟೆ

1646 - ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ವ್ಯವಸಾಯೋತ್ಪನ್ನ ಮಾರುಕಟ್ಟೆ ಯಶವಂತಪುರ ಇಲ್ಲಿ ಎಷ್ಟು ಮಂಡಿ ದಲ್ಲಾಲಿಗಳು ಮತ್ತು ವರ್ತಕರು ಲೈಸನ್ಸ್ ಪಡೆದಿರುತ್ತಾರೆ. ಇವರ ಪೈಕಿ ಎಷ್ಟು ಮಂದಿಗೆ ಸ್ವಂತ ಗೋದಾಮುಗಳಿರುತ್ತದೆ. ಎಷ್ಟು ಮಂದಿ ಬಾಡಿಗೆಯಲ್ಲಿ ವ್ಯವಹಾರ ನಡೆಸುತ್ತಿರುತ್ತಾರೆ?*